ದಿನಾಂಕಃ 03.08.2026 ರಂದು ಸಾಕ್ಷಿದಾರರಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಕೆ.ಎಂ.ಪಿ. ವಕೀಲರಿಂದಃ**

ಸಾಕ್ಷಿಯು ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿದ್ದು ಅವುಗಳನ್ನು ಈ ಕೆಳಕಂಡಂತೆ ನಿಶಾನೆಯಾಗಿ ಗುರುತಿಸಲಾಗಿದೆ.

| ಕ್ರ. ಸಂ. | ದಾಖಲಾತಿಗಳು | ನಿಶಾನೆಗಳು |
|---|---|---|
| 1 | Certified copy of MR No.28/1995-96 Extract | ನಿಡಿ-10 |

**ಪಾಟೀ ಸವಾಲಿಲು ವಾದಿ ಪರ ವಕೀಲರಿಂದಃ-**

1. ನಿಡಿ-10 ಅನ್ನು ನೀವು ಸೃಷ್ಟಿಸಿರುತ್ತೀರಾ ಎಂದರೆ ಸರಿಯಲ್ಲ. ಅರ್ಜಿ ಹಾಕಿರುವ ಬಗ್ಗೆ ಮತ್ತು ಯಾವ ದಿನಾಂಕದಂದು ಸದರಿ ದಾಖಲೆಯನ್ನು ನೀಡಲಾಗಿದೆ ಎನ್ನುವ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ.

2. ವಾದಿ ನಿಮ್ಮ ಮೇಲೆ ಯಾವ ಪರಿಹಾರ ಕೇಳಿ ಸದರಿ ದಾವಾ ಹಾಕಿದ್ದಾರೆ ಎಂದರೆ ಅವರ ಜಾಗವನ್ನು ತೊದರೆ ಕೊಡುತ್ತಿದ್ದಾರೆ ಎಂದು ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಆದರೆ ನಾವು ಅವರ ಜಾಗಕ್ಕೆ ತೊಂದರೆ ಕೊಡುತ್ತಿಲ್ಲ ಎಂದು ನುಡಿಯುತ್ತಾರೆ. ಅದಕ್ಕೆ ಸಂಬಂದಪಟ್ಟಂತೆ ಅವರು ಪೊಲೀಸರಿವರೆ ದೂರು ನೀಡಿದ್ದಾರೆ ಎಂದರೆ ಪೋಲಿಸ್ ಠಾಣೆಯಲ್ಲಿ ಅವರಿಗೆ ಬುದ್ದಿ ಹೇಳಿ ಕಳುಹಿಸಿರುತ್ತಾರೆ ಅವರು ಒಪ್ಪಿರುತ್ತಾರೆ ಎಂದು ನುಡಿಯುತ್ತಾರೆ.

3. ನೀವು ವಾದಿಯರ ಜಾಗಕ್ಕೆ ಹೋಗಿ ಸಿ.ಸಿ.ಟಿ.ವಿ ಅಳವಡಿಸಿದ್ದು ಅದಕ್ಕೆ ಅವರು ದೂರು ನೀಡಿದ್ದಾರೆ ಎಂದರೆ ಸರಿಯಲ್ಲ.

4. ವಾದಿಯವರು ತೊಂದರೆ ಕೊಡದಿದ್ದರೂ ಸಹ. ಅವರ ವಿರುದ್ಧ ಸುಳ್ಳು ಅರ್ಜಿಯನ್ನು ಹಾಕಿದ್ದೀರಾ ಎಂದರೆ ಸರಿಯಲ್ಲ.

5. 1978-79 ರಲ್ಲಿ ಎ.ಸಿ. ನ್ಯಾಯಾಲಯದಿಂದ ಮಂಜೂರಾಗಿರುತ್ತದೆ. ಅದಕ್ಕೆ ಸಂಬಂದಪಟ್ಟಂತೆ ದಾಖಲೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

6. ದಾವಾ ಜಮೀನಿನ ಚಕ್ಕುಬಂದಿ ಸರಿಯಾಗಿ ವಾದಪತ್ರದಲ್ಲಿ ನಮೂದು ಮಾಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಜಾಗದ ಉತ್ತರಕ್ಕೆ ಅವರ ಜಮೀನು ಬರುತ್ತದೆ. ನಮ್ಮ ಜಾಗ 3 ಎಕರೆ ಇದೆ. ಅವರ ಜಾಗ ಎಷ್ಟು ಬರುತ್ತದೆ ಎಂದು ನನಗೆ ಗೊತ್ತಿಲ್ಲ.

7. ನಮ್ಮ ತಂದೆಗೆ 5 ಜನ ಮಕ್ಕಳು. ಚಂದ್ರಮ್ಮ, ಸುರೇಶ, ವಿನೋದ, ಸೀತಾ, ಶಾಂತಲ.

8. ಸರ್ವೆ ನಂ.521 ರ ದಕ್ಷಿಣಕ್ಕೆ ಯಾವ ಸರ್ವೆ ನಂಬರ್ ಬರುತ್ತದೆ ಎಂದರೆ ಸರ್ವೆ ನಂಬರ್ ಗೊತ್ತಿಲ್ಲ.

ಸುಂದರೇಶ್ ರವರ ಜಾಗ ಎಂದು ನುಡಿಯುತ್ತಾರೆ. ಸುಂದರೇಶ್ ರವರು ನಮ್ಮ ಜಮೀನಿನ ಅಕ್ಕಪಕ್ಕದವರು. ಅವರು ನಮ್ಮ ಸಂಬಂಧಿಕರಲ್ಲಿ.

9. ಸರ್ವೆ ನಂ.50/3 ರಲ್ಲಿ 2 ಎಕರೆ ಇದೆ ಎಂದರೆ ಅವರ ಜಮೀನು ಇದೆ ಆದರೆ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ.

10. ಸರ್ವೆ ನಂ.521 ರಲ್ಲಿ 3 ಎಕರೆ ಜಮೀನು ಇದೆ ಎಂದರೆ ನಮ್ಮ ಜಾಗ ಎಂದು ನುಡಿಯುತ್ತಾರೆ. ಅದಕಕ್ಷ್ ಸಂಬಂದಪಟ್ಟಂತೆ ಯಾವ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಕಾಫಿ ಗಿಡವನ್ನು ವಾದಿಯವರೇ ಹಾಕಿರುತ್ತಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದರಿಂದ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.